# ಚಿಕನ್ ತಿನ್ನಿಸಿದ ಪ್ರೀತಿಗೆ ಏನೆನ್ನಲಿ

**ಆಶಿಕಾ ಪಡುಕೋಣೆ**
ಝೀಕನ್ನಡದ 'ತ್ರಿನಯನಿ'



◆ **ನಿಮ್ಮ ಪಾತ್ರದ ಹೆಸರಿನ ವಿಶೇಷ ಏನು?**

ವಿಶಾಲಾಕ್ಷಿ ದೇವಿಯ ಪೂಜಾರಿಯ ಮೊಮ್ಮಗಳು ತ್ರಿನಯನಿ. ದೇವಿ ಆಕೆಗೆ ವರವೊಂದನ್ನು ಕೊಟ್ಟಿದ್ದಾಳೆ. ಅದು ಆಕೆಯ ಪಾಲಿಗೆ ವರವಾಗಿದೆಯೋ ಅಥವಾ ಶಾಪವಾಗಿದೆಯೋ ಎನ್ನುವುದೇ ಈ ಕಥೆಯ ಹೂರಣ. ಅವಳಿಗೆ ಯಾರಾದರೂ ಆಪತ್ತು ಅಥವಾ ತೊಂದರೆಯಲ್ಲಿ ಸಿಲುಕಿದರೆ ಗೊತ್ತಾಗುತ್ತದೆ. ಅವರ ನೆರವಿಗೆ ತಕ್ಷಣ ಹೋಗುತ್ತಾಳೆ. ಅದನ್ನು ಬೇರೆಯವರಿಗೂ ಹೇಳುತ್ತಾಳೆ. ಈ ಕಾರಣಕ್ಕೆ ಊರಜನ ಅಪಶಕುನ ನುಡಿಯುವ ಹುಡುಗಿ ಎಂದು ಊರಾಚೆ ಆಚೆ ಹಾಕುವ ಯತ್ನದಲ್ಲಿ ಇರುತ್ತಾರೆ. ಈ ಸಂಗತಿಯನ್ನು ಅರಿತ ಕಥಾನಾಯಕನ ತಂದೆ, ತನ್ನ ಮಗನನ್ನು ಕಾಪಾಡುವ ಸಂಬಂಧ ಅವನ ಜೊತೆ ಮದುವೆ ಮಾಡಿಸುತ್ತಾರೆ. ನಾಯಕನ ಜೀವಕ್ಕೆ ಆಪತ್ತು ಇರುತ್ತದೆ. ಅವಳಿಗೆ ಭವಿಷ್ಯದ ನೋಟವಿದೆ.

◆ **ನಟನೆಯ ಆರಂಭದ ದಿನಗಳು ಹೇಗಿದ್ದವು?**

ಎಂಜಿನಿಯರಿಂಗ್ ಮುಗಿಸಿದ ಮೇಲೆ ಕೆಲಸಕ್ಕೆ ಹೋಗುವ ಉದ್ದೇಶ ಇತ್ತು. ಆ ಸಮಯದಲ್ಲಿ ಆಡಿಷನ್ ನೀಡಿದೆ. ಅದಕ್ಕೂ ಮುನ್ನ ನಿರ್ದೇಶಕ ವಿನು ಬಳಂಜ 'ನಿಹಾರಿಕಾ' ಧಾರಾವಾಹಿಗೆ ಕರೆದಿದ್ದರು. ಬಿಇ ಅಂತಿಮ ವರ್ಷದಲ್ಲಿ ಇದ್ದಾಗ ಈ ಅವಕಾಶ ಬಂದಿತ್ತು. ಅದು ನಾಯಕಿಯ ಹಿನ್ನೋಟದ ಪಾತ್ರ. ನಂತರ ನಾಯಕಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡು ಬೇರೆಯ ರೂಪದಲ್ಲಿ ಬಿಂಬಿತ ಆಗುತ್ತಾಳೆ. ಅಭಿನಯಕ್ಕೆಲ್ಲ ಸಮಯದ ಹೊಂದಾಣಿಕೆ ಆಗಲ್ಲ ಎನ್ನುವ ನಿಲುವು ನನ್ನದಾಗಿತ್ತು. ಅದಕ್ಕೆ ಪೂರಕವಾಗಿ ಬಿಡುವಿನ ಸಮಯದಲ್ಲಿ ಬಂದು ಮಾಡಲು ಸಲಹೆಯನ್ನು ಅವರು ನೀಡಿದರು. ಪಾತ್ರ ದೀರ್ಘ ಕಾಲ ಇರಲ್ಲ ಎಂದು ಮಾಡಿಸಿದರು. ನಂತರ 'ತ್ರಿವೇಣಿ ಸಂಗಮ' ಅವಕಾಶ ಬಂತು. ಕೆಲಸಕ್ಕೆ ಸೇರಲು ಇನ್ನೂ ಮೂರು ತಿಂಗಳು ಸಮಯ ಇತ್ತು ಎಂದು ಒಪ್ಪಿದೆ. ಅದಾದ ಮೇಲೆ ತೆಲುಗುನಲ್ಲಿ ಅವಕಾಶ ಸಿಕ್ಕಿತು. ನಂತರ 'ತ್ರಿನಯನಿ' ಕೂಡ ತೆಲುಗು ಧಾರಾವಾಹಿ. ಅದನ್ನು ಈಗ ಕನ್ನಡದಲ್ಲಿ ಡಬ್ ಮಾಡುತ್ತಿದ್ದಾರೆ.

◆ **ನಿಮ್ಮ ಬಾಲ್ಯದ ಕನಸುಗಳು ಏನಾಗಿದ್ದವು?**

ಅಭಿನಯ ರಂಗಕ್ಕೆ ಬರುತ್ತೇನೆಂದು ಅಂದುಕೊಂಡೇ ಇರಲಿಲ್ಲ. ಅಪ್ಪ, ನಾನು ಎಲ್ಲ ಕ್ಷೇತ್ರದಲ್ಲಿ ಇರಬೇಕು ಎಂದು ಗಾಯನ, ಕ್ರೀಡೆ, ನೃತ್ಯ, ಚಿತ್ರಕಲೆ ಎಲ್ಲವನ್ನೂ ಕಲಿಯುವ ಅವಕಾಶ ಮಾಡಿಕೊಟ್ಟಿದ್ದರು. ಶಾಲೆ–ಕಾಲೇಜಿನಲ್ಲಿ ಎಲ್ಲ ಸ್ಪರ್ಧೆಯಲ್ಲೂ ನಾನು ಮುಂದೆ ಇರುತ್ತಿದ್ದೆ. ಅದರ ಜೊತೆಗೆ ಓದಿನಲ್ಲಿಯೂ ಚುರುಕಾಗಿಯೇ ಇದ್ದೆ. ಎಲ್ಲ ಮಾಡಬೇಕು, ಓದೇ ಮೊದಲ ಆದ್ಯತೆ ಆಗಬೇಕು ಎಂದು ನನ್ನ ತಂದೆ ಹೇಳುತ್ತಿದ್ದರು. ಯಾವತ್ತೂ ಓದನ್ನು ಬಿಟ್ಟಿಲ್ಲ. ಆದರೂ ಅಭಿನಯ ರಂಗದ ಯೋಚನೆ ಮಾಡಿರಲಿಲ್ಲ. ಹಾಗೇನಾದರೂ ಇದ್ದಿದ್ದರೆ ಆ ನಿಟ್ಟಿನಲ್ಲಿಯೂ ಕೆಲಸವನ್ನು ನಿರ್ವಹಿಸುತ್ತಿದ್ದೆ. ನಮ್ಮ ಸೋದರ ಮಾವ ನನ್ನನ್ನು ಕಿರುತೆರೆಗೆ ಮೊದಲು ಪರಿಚಯಿಸಿದರು. ಆಗ ಸುಮ್ಮನೆ ಟೈಮ್ ಪಾಸ್ ಅಂತ ಹೋಗಿದ್ದೆ. ಆದರೆ ಅದೇ ವೃತ್ತಿಯಾಯಿತು. ಅಪ್ಪ, ಗೋಪಾಲ್ ಪಡುಕೋಣೆ, ಯುಕೊ ಬ್ಯಾಂಕಿನಲ್ಲಿ ಅಧಿಕಾರಿ. ಅಮ್ಮ ಹೇಮಲತಾ ನನ್ನ ಬೆಂಬಲಕ್ಕೆ ನಿಂತಿದ್ದಾರೆ.

◆ **ವೃತ್ತಿ ಜೀವನದ ಮುಂದಿನ ನಿರೀಕ್ಷೆ...**

ನಾನು ಹೆಚ್ಚು ಯೋಚನೆ ಮಾಡಿ ಭವಿಷ್ಯದ ಯೋಜನೆ ಹಾಕಿಕೊಳ್ಳುವುದಿಲ್ಲ. ಸಮಯ ಬಂದ ಹಾಗೆ ತೆಗದುಕೊಳ್ಳುತ್ತೇನೆ. ಹೇಗೆ ಆಗುತ್ತದೆ ಎಂದು ಮುಂದೆ ನೋಡಬೇಕು. ಒಳ್ಳೆಯ ಕಥೆ ಇದ್ದರೆ ಮುಂದೆ ಸಿನಿಮಾ ಮಾಡಬಹುದು. ಸದ್ಯ ಯಾವುದೇ ನಿರ್ಬಂಧಗಳು ನನಗಿಲ್ಲ. ಒಳ್ಳೆಯ ಪಾತ್ರ ಇರಬೇಕು ಎನ್ನುವುದು ನನ್ನ ಬಯಕೆ.

◆ **ಅನಿರೀಕ್ಷಿತ ವೃತ್ತಿ ಜೀವನ ನಿಮ್ಮಲ್ಲಿ ತಂದ ಬದಲಾವಣೆ ಏನು?**

ಕುಟುಂಬ ವರ್ಗದಲ್ಲಿ ತುಂಬ ಖುಷಿ ಪಡುತ್ತಾರೆ. ನಾನು ಮನೆಯಲ್ಲಿ ಮುದ್ದಿನ ಮಗಳು. ನನ್ನ ತಾಯಿಯ ತಂದೆ (ನನ್ನ ತಾತ) ರಂಗಭೂಮಿ ಕಲಾವಿದರು. ಅವರ ಆಸಕ್ತಿಯನ್ನು ಮುಂದೆವರಿಸುತ್ತಿದ್ದೇನೆ ಎಂದು ಅವರೂ ಖುಷಿ ಪಡುತ್ತಾರೆ. ಆರಂಭದಲ್ಲಿ ಈ ಬಗ್ಗೆ ಕುಟುಂಬದಲ್ಲಿ ಆಕ್ಷೇಪವೂ ಇತ್ತು. 'ಚೆನ್ನಾಗಿ ಓದುತ್ತಿದ್ದಳು, ಅವಳನ್ನು ಇಲ್ಲಿಗೇಕೆ ಸೇರಿಸಿದ್ದೀರಿ' ಎಂದು ಕೇಳಿದವರೂ ಇದ್ದರು. ಈಗ ನನ್ನ ನಟನೆಯನ್ನು ನೋಡಿ ಅವರೂ ಬೆಂಬಲಿಸುತ್ತಿದ್ದಾರೆ. ವೈಯಕ್ತಿಕವಾಗಿ ನನ್ನಲ್ಲಿ ಹೇಳುವಂತಹ ಬದಲಾವಣೆಯಾಗಿಲ್ಲ. ಇಲ್ಲಿ ಕೆಲಸದ ಒತ್ತಡ ಹೆಚ್ಚಿರುತ್ತದೆ. ಹಾಗಾಗಿ ಸಮಯ ಕೊಡಲು ಆಗುವುದಿಲ್ಲ. ಸಮಾಜವೂ ಕೂಡ ನಮ್ಮನ್ನು ಪ್ರೀತಿಸುತ್ತದೆ. ಎಷ್ಟೊಂದು ಜನ ಮನೆಮಗಳಂತೆ ನೋಡುತ್ತಾರೆ. ಕೆಲವರು ಹುಡುಕಿಕೊಂಡು ಬಂದು ಊಟಕ್ಕೆ ನಿಮ್ಮ ಇಷ್ಟ ಏನು? ಎಂದು ಕೇಳುತ್ತಾರೆ. ನನಗೆ ಚಿಕನ್ ಅಂದ್ರೆ ಇಷ್ಟ. ಒಬ್ಬರು ಚಿಕನ್ ವೈವಿಧ್ಯ ಅಡುಗೆಯನ್ನು ಮನೆಯಲ್ಲಿ ಮಾಡಿಕೊಂಡು ಬಂದು ಉಣಬಡಿಸಿದ್ದಾರೆ. ನಾವು ನಮ್ಮ ಕೆಲಸ ಮಾಡಿದರೂ ಜನರ ಮನಸ್ಸಿನಲ್ಲಿ ಎಲ್ಲೋ ಉಳಿಯುತ್ತೇವೆ ಎನ್ನುವುದು ಅತ್ಯಂತ ಸ್ಮರಣೀಯ. ಪಾತ್ರದಲ್ಲಿರುವ ಚಿತ್ರಕ್ಕೂ ನನ್ನ ಸ್ವರೂಪಕ್ಕೂ ಭಿನ್ನತೆ ಇದೆ. ಆದರೂ ಜನ ಗುರುತಿಸುತ್ತಾರೆ. ಅತ್ಯಂತ ಕಡಿಮೆ ಅವಧಿಯಲ್ಲಿ ಹೆಚ್ಚು ಪರಿಚಿತಳಾಗಿದ್ದೇನೆ.

■ **ರಾಘವೇಂದ್ರ ಕೆ.**